ನಮ್ಮ ಕಚೇರಿಯು ಮಾಡಿದ ಎರಡೂವರೆ ಆಣೆಯ ಖರ್ಚನ್ನು ಸಕ್ರಮಗೊಳಿಸಬೇಕೆಂದು ಈ ಮೂಲಕ ಕೋರಲಾಗಿದೆ.

ವಂದನೆಗಳೊಂದಿಗೆ,
ತಮ್ಮ ವಿಶ್ವಾಸಿ
(ಡಾ. ಸತ್ಯಾರ್ಥಿ ಚಟರ್ಜಿ)
ಕೇಂದ್ರ ನಿರ್ದೇಶಕ

ಲೆಕ್ಕ ಪರಿಶೋಧಕರ ವರದಿ ಕೈಸೇರಿದ ಎರಡೇ ದಿನಗಳಲ್ಲಿ ಡಾ. ಚಟರ್ಜಿಯವರು ದೆಹಲಿಯ ಮಹಾನಿರ್ದೇಶನಾಲಯಕ್ಕೆ ಬರೆದ ವಿವರಣೆಯ ಪತ್ರವಿದು. ಆ ಪತ್ರ ಬರೆದು ಯಥಾಪ್ರಕಾರ ಅವರು ತಮ್ಮ ನಿತ್ಯದ ಕೆಲಸದಲ್ಲಿ ತೊಡಗಿದರು.

★★★

ಒಳಗೆ ಬಂದ ಪಪಿಯಾ ತಮ್ಮ ಮುಗುಳುನಗೆಯನ್ನು ನೋಡಿ ಮತ್ತೆ ಏನಾದರೂ ಕಿಲಾಡಿ ಪ್ರಶ್ನೆಗಳನ್ನು ಕೇಳಬಹುದೆಂದು ಊಹಿಸಿ, ಅವಳು ಬಾಯಿ ತೆಗೆಯುವ ಮೊದಲೇ, 'ಹಾಂ, ಪಪಿಹಾ ಈ ಪತ್ರವನ್ನು ಓದು' ಎಂದು ನೇರವಾಗಿ ಸೂಚಿಸಿದರು ಡಾ. ಚಟರ್ಜಿ. ತಾವು ಓದಿದ್ದಲ್ಲದೆ, ತಮ್ಮ ಸ್ಟೆನೋಗಳಿಂದ ಪತ್ರವನ್ನು ಓದಿಸಿ ಕೇಳುವ ಪರಿಪಾಠ ಅವರಿಗೆ ಮೊದಲಿನಿಂದಲೂ ಬಂದ ರೂಢಿ. ಕುತೂಹಲದಿಂದ ಪತ್ರವನ್ನು ಕೈಗೆತ್ತಿಕೊಂಡ ಪಪಿಹಾ ನಿಧಾನವಾಗಿ ಓದತೊಡಗಿದಳು.

ಕೇಂದ್ರ ನಿರ್ದೇಶಕರಿಗೆ, ನವದೆಹಲಿ

ದಿನಾಂಕ 18ರಂದು ಸರಕಾರಿ ಲೆಕ್ಕಪರಿಶೋಧಕರು ಎತ್ತಿದ ಆಕ್ಷೇಪಣೆಗೆ, ಕಲ್ಕತ್ತಾ ಆಕಾಶವಾಣಿಯ ನಿರ್ದೇಶಕರಿಂದ ಬಂದ ದಿನಾಂಕ: 20ರ ವಿವರಣಾ ಪತ್ರವನ್ನು ಗಮನಿಸಲಾಗಿದೆ. ಕೇಂದ್ರ ನಿರ್ದೇಶಕರ ಈ ವಿವರಣೆ ಕಾನೂನುಬದ್ಧವಾಗಿಲ್ಲ. ಏಕೆಂದರೆ, ಹುಲಿಯು ಆಕಾಶವಾಣಿಯ ಕಲಾವಿದರ ಶ್ರೇಣಿಯಲ್ಲಿ ಬರುವುದಿಲ್ಲ. ಮ್ಯಾನ್ಯೂವಲ್ ಪ್ರಕಾರ, ಆಕಾಶವಾಣಿ ಮತ್ತು ಕಲಾವಿದರ ನಡುವೆ ಒಪ್ಪಂದ (ಕಾಂಟ್ರ್ಯಾಕ್ಟ್) ಏರ್ಪಟ್ಟಿದ್ದರೆ ಮಾತ್ರ ಅಂಥವರನ್ನು ಆಕಾಶವಾಣಿಯ ಅಧಿಕೃತ ಕಲಾವಿದರೆಂದು ಪರಿಗಣಿಸಲಾಗುತ್ತದೆ. ಹಾಗೇನಾದರೂ ಹುಲಿಗೆ ಕಾಂಟ್ರ್ಯಾಕ್ಟ್ ಕೊಡ ಮಾಡಿದ್ದರೆ, ಅದರ ಸಹಿಯೊಂದಿಗೆ ಕಾಂಟ್ರ್ಯಾಕ್ಟ್ ಪ್ರತಿಯನ್ನು ಒದಗಿಸಿದ್ದ ಪಕ್ಷದಲ್ಲಿ ನಿಮ್ಮ ವಿವರಣೆಯನ್ನು ಸಮ್ಮತಿಸಬಹುದಾಗಿತ್ತು. ಆದರೆ, ಹುಲಿಗೆ ನೀವು ಅಂಥ ಒಪ್ಪಂದ ಪತ್ರವನ್ನು ನೀಡಿಲ್ಲವಾದ ಕಾರಣ ಅದನ್ನು ಕಲಾವಿದನೆಂದು ಪರಿಗಣಿಸಲು ಬರುವುದಿಲ್ಲ. ಹೀಗಿದ್ದೂ ಅದಕ್ಕೆ ಚಹಾ–ಪಾನೀಯ ಉಪನಿಬಂಧನೆಯಡಿ ಎರಡೂವರೆ ಆಣೆಯ ಮಾಂಸದ ತುಂಡನ್ನು ಖರೀದಿಸಿ ತಿನಿಸಿದ್ದು ನಿಯಮಗಳ ಪ್ರಕಾರ ಕ್ರಮಬದ್ಧವಾಗಿಲ್ಲ. ಅದಕ್ಕಾಗಿ ಇಂಥ ಪ್ರಮಾದವನ್ನು ಎಸಗಿದ ಅಧಿಕಾರಿಯ ಮೇಲೆ ಆ ಜವಾಬ್ದಾರಿಯನ್ನು ಹೊರಿಸಿ, ಒಂದು ಮೆಮೋ ಕೊಟ್ಟು, ಹದಿನೈದು ದಿನಗಳ ಒಳಗಾಗಿ ಆ ಎರಡೂವರೆ ಆಣೆಯನ್ನು ಅವರಿಂದಲೇ ವಸೂಲು ಮಾಡಿ ಸರಕಾರಕ್ಕೆ ಕಟ್ಟಬೇಕೆಂದು ಈ ಮೂಲಕ ಸೂಚಿಸಲಾಗಿದೆ. ಈ ಪ್ರಕ್ರಿಯೆ ಮುಗಿಸಿ, ಅಗತ್ಯ ವಿವರಗಳನ್ನು ತಕ್ಷಣವೇ ಮಹಾನಿರ್ದೇಶನಾಲಯದ ಗಮನಕ್ಕೆ ತರಲು ಸೂಚಿಸಲಾಗಿದೆ.

ಮಾಹಾನಿರ್ದೇಶಕರ ಪರವಾಗಿ

★★★

ಪಪಿಹಾ ಓದಿದ ಪತ್ರದ ಸಾರವನ್ನು ಕೇಳಿದ ಡಾ. ಚಟರ್ಜಿಯವರು ತಮ್ಮ ಸಹಜ ಪ್ರವೃತ್ತಿಗೆ